ಪರೀಕ್ಷೆಗಳ ಮೌಲ್ಯಮಾಪನ

3860(4732); ಶ್ರೀ .ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ)

ಅ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ (RGUHS) ದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳ ಮೌಲ್ಯಮಾಪನ ಮಾಡಲು ಇರುವ ವಿಧಿವಿಧಾನಗಳೇನು;

ಆ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯ (RGUHS) ದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳ ಮೌಲ್ಯಮಾಪನದಲ್ಲಿ ಅಕ್ರಮವಾಗಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಮೌಲ್ಯಮಾಪನದಲ್ಲಿ ಅಕ್ರಮವೆಸಗಿರುವ ಅಧಿಕಾರಿ / ಪ್ರಾಧ್ಯಾಪಕರುಗಳ ಮೇಲೆ ಕೈಗೊಂಡ ಕ್ರಮಗಳೇನು (ವಿವರ ನೀಡುವುದು);

ಈ) ಅರ್ಹ ವಿದ್ಯಾರ್ಥಿಗಳಿಗೆ ನ್ಯಾಯ ಸಮ್ಮತ ಅಂಕಗಳು ತಾರತಮ್ಯಗಳಿಲ್ಲದೆ ದೊರಕುವಂತಾಗಲು ವಿಶ್ವವಿದ್ಯಾನಿಲಯ ರೂಪಿಸಿರುವ ಹೊಸ ಯೋಜನೆಗಳಾವುವು (ಸಂಪೂರ್ಣ ಮಾಹಿತಿ ನೀಡುವುದು)?

ಡಾ॥ ಶರಣ ಪ್ರಕಾಶ ಪಾಟೀಲ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು)

ಅ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕೇಂದ್ರಗಳನ್ನು ಗುರುತುಪಡಿಸಿ ಆಯಾ ಕೇಂದ್ರಗಳಿಗೆ ಉತ್ತರಪತ್ರಿಕೆಗಳನ್ನು ರವಾನಿಸಲಾಗುವುದು ಹಾಗೂ ವಿಶ್ವವಿದ್ಯಾಲಯದಲ್ಲಿ ಬಹುಮೌಲ್ಯಮಾಪನ ವಿಧಾನವನ್ನು ಅನುಸರಿಸಲಾಗುತ್ತಿದೆ. ಅಂದರೆ ಪದವಿ ಉತ್ತರ ಪತ್ರಿಕೆಗಳನ್ನು ಎರಡು ಬಾರಿ ಹಾಗೂ ಸ್ನಾತಕೋತ್ತರ ಉತ್ತರ ಪತ್ರಿಕೆಗಳನ್ನು ನಾಲ್ಕು ಬಾರಿ ಮೌಲ್ಯಮಾಪನ ಮಾಡಲಾಗುತ್ತಿದೆ. ಈ ಬಹು ಮೌಲ್ಯಮಾಪನದ ನಂತರವೂ ಶೇ. 15 ರಷ್ಟು ವ್ಯತ್ಯಾಸ

ಕಂಡು ಬಂದಲ್ಲಿ ಪದವಿಯ ಹಾಗೂ ಸ್ನಾತಕೋತ್ತರ ಪದವಿಯ ಉತ್ತರ ಪತ್ರಿಕೆಗಳನ್ನು ಕ್ರಮವಾಗಿ ಮೂರನೇ ಹಾಗೂ ಐದನೇ ಮೌಲ್ಯಮಾಪನಕ್ಕೆ ಒಳಪಡಿಸಲಾಗುತ್ತದೆ. ನಂತರ ಇದರ ಉತ್ತಮವಾದ ಅಂಕಗಳನ್ವಯ ಪರಿಗಣಿಸಿ ಫಲಿತಾಂಶವನ್ನು ಪ್ರಕಟಿಸಲಾಗುವುದು.

ಫಲಿತಾಂಶದ ನಂತರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಮರುಎಣಿಕೆ ಹಾಗೂ ಉತ್ತರ ಪತ್ರಿಕೆಯ ನಕಲನ್ನು ಪಡೆಯಲು ಅವಕಾಶ ಕಲ್ಪಿಸಿಕೊಟ್ಟಿದ್ದು, ವಿದ್ಯಾರ್ಥಿಗಳು ಉತ್ತರ ಪತ್ರಿಕೆಯ ಹಾಗೂ ಅಂಕಗಳ ನಕಲನ್ನು ಪಡೆದ ನಂತರ ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ಮೌಲ್ಯಮಾಪನ ವಿಭಾಗದ ಕುಲಸಚಿವರ ಗಮನಕ್ಕೆ ತರಬಹುದು ಹಾಗೂ ಅದು ಸರಿಯೆನಿಸಿದ್ದಲ್ಲಿ ಕುಲಪತಿಗಳ ಒಪ್ಪಿಗೆಯ ನಂತರ ಆ ಪ್ರಶ್ನೆಗೆ ಮರುಮೌಲ್ಯಮಾಪನ ಮಾಡಿ ಆ ಅಂಶವನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸಲಾಗುವುದು.

ಆ) ಹೌದು.

ಇ) ಮೌಲ್ಯಮಾಪನದಲ್ಲಿ ಅಕ್ರಮವೆಸಗಿದ್ದ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ಕುಲಸಚಿವರಾದ ಡಾ॥ ಎನ್.ಎಸ್. ಅಶೋಕ್ ಕುಮಾರ್ ಇವರನ್ನು ಅಮಾನತ್ತಿನಲ್ಲಿರಿಸಿ ಇವರ ವಿರುದ್ಧ ತಿಲಕ್ ನಗರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಿಸಲಾಗಿದೆ. ಹಾಗೆಯೇ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ವಹಿಸಲಾಗಿದ್ದು, ತನಿಖೆಯು ಪ್ರಗತಿಯಲ್ಲಿದೆ.

ಈ)

- ಬಹುಮೌಲ್ಯಮಾಪನವನ್ನು ಪ್ರತ್ಯೇಕವಾಗಿ ಎರಡು ಕೇಂದ್ರಗಳಲ್ಲಿ ಮಾಡಿಸಲಾಗುತ್ತದೆ.

- ಮೌಲ್ಯಮಾಪನವಾದ ನಂತರ ಅಂಕಗಳನ್ನು ಆಯಾ ಕೇಂದ್ರಗಳಲ್ಲಿ ಆನ್‌ಲೈನ್ ಮಾಡಿದ ನಂತರ ಆ ಅಂಕಗಳನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸಲಾಗುವುದು.

- ಫಲಿತಾಂಶದ ನಂತರ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವು ಮರುಎಣಿಕೆ ಹಾಗೂ ಉತ್ತರ ಪತ್ರಿಕೆಯ ನಕಲನ್ನು ಪಡೆಯಲು ಅವಕಾಶ ಕಲ್ಪಿಸಿಕೊಟ್ಟಿದ್ದು, ವಿದ್ಯಾರ್ಥಿಗಳು ಉತ್ತರ ಪತ್ರಿಕೆಯ ಹಾಗೂ ಅಂಕಗಳ ನಕಲನ್ನು ಪಡೆದ ನಂತರ ಏನಾದರೂ ವ್ಯತ್ಯಾಸ ಕಂಡುಬಂದಲ್ಲಿ ಮೌಲ್ಯಮಾಪನ ವಿಭಾಗದ ಕುಲಸಚಿವರ ಗಮನಕ್ಕೆ ತರಬಹುದು ಹಾಗೂ ಅದು ಸರಿಯೆನಿಸಿ, ಇಬ್ಬರು ಮೌಲ್ಯಮಾಪಕರೂ ಕೂಡ ಎಡವಿದ್ದಲ್ಲಿ ಕುಲಪತಿಗಳ ಒಪ್ಪಿಗೆಯ ನಂತರ ಆ ಪ್ರಶ್ನೆಗೆ ಮರುಮೌಲ್ಯಮಾಪನ ಮಾಡಿ ಆ ಅಂಶವನ್ನು ಪರಿಗಣಿಸಿ ಫಲಿತಾಂಶ ಪ್ರಕಟಿಸಲಾಗುವುದು.

ಗುತ್ತಿಗೆ ಆಧಾರದ ನೌಕರರು

3862(4734); ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ

ಅ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯದಲ್ಲಿ ಇರುವ ವಿವಿಧ ದರ್ಜೆಯ ಸಿಬ್ಬಂದಿ ವರ್ಗಗಳ ಸಂಖ್ಯೆ ಎಷ್ಟು; ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ವಿವರ ನೀಡುವುದು);

ಆ) ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಲ್ಲಿ ನೇರವಾಗಿ ನೇಮಿಸಕೊಂಡ ಸಿಬ್ಬಂದಿಗಳೆಷ್ಟು; ಏಜೆನ್ಸಿ ಮುಖಾಂತರ ನೇಮಿಸಿಕೊಂಡ ಸಿಬ್ಬಂದಿಗಳೆಷ್ಟು; (ಸಿಬ್ಬಂದಿವಾರು ಸಂಪೂರ್ಣ ಮಾಹಿತಿ ನೀಡುವುದು);

ಇ) ತಾತ್ಕಾಲಿಕ ಮತ್ತು ಗುತ್ತಿಗೆ ಆಧಾರದ ನೌಕರರು ಸೇರಿದಂತೆ ಎಲ್ಲ ಸಿಬ್ಬಂದಿ ವರ್ಗದವರಿಗೂ ಸೇವಾ ಭದ್ರತೆಯನ್ನು ಒದಗಿಸುವ